KABK200019082023

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರು,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

VIJAYAKUMAR KANNUR

Digitally signed by VIJAYAKUMAR KANNUR
Date: 2025.07.08 09:53:10 +0530

ದಿನಾಂಕ: **4** ನೇ ಜುಲೈ **2025**

ಅಸಲು ದಾವೆ ನಂ.**373/2023**

ವಾದಿಯರು :

**1.** ಶ್ರೀಮತಿ. ಜ್ಯೋತಿಲಕ್ಷ್ಮೀ ಗಂಡ ಸಚಿನ ಕೋಳಿ,
ವಯಾ: **29** ವರ್ಷ, ಉ: ಮನೆಗೆಲಸ,
ಸಾ: ಪೋನದ ಗೋವಾ,
ಹಾಲಿ ವಾಸಃ ಚಿಕ್ಕೋಡಿ, ತಾಃ ಚಿಕ್ಕೋಡಿ.

**2.** ಕುಮಾರಿ. ಶ್ರೇಯಾ ತಂದೆ ಸಚಿನ ಕೋಳಿ,
ವಯಾಃ **7** ವರ್ಷ, ಉಃ ವಿದ್ಯಾರ್ಥಿ,
ಸಾಃ ಪೋನದ ಗೋವಾ,
ಹಾಲಿ ವಾಸಃ ಚಿಕ್ಕೋಡಿ, ತಾಃ ಚಿಕ್ಕೋಡಿ.
ಪರವಾಗಿ ಅಲ್ಪವಯಿ ಪಾಲನ ಕರ್ತೆ
ಶ್ರೀಮತಿ. ಜ್ಯೋತಿಲಕ್ಷ್ಮೀ ಗಂಡ ಸಚಿನ ಕೋಳಿ
ವಯಾ: **29** ವರ್ಷ, ಉ: ಮನೆಗೆಲಸ,
ಸಾ: ಪೋನದ ಗೋವಾ,
ಹಾಲಿ ವಾಸಃ ಚಿಕ್ಕೋಡಿ, ತಾಃ ಚಿಕ್ಕೋಡಿ.

(ವಾದಿಯ ಪರ ಶ್ರೀ. ಎಲ್.ಬಿ.ಸಿ., ವಕೀಲರು)

- ವಿರುದ್ಧ -

ಪ್ರತಿವಾದಿಯರು :

**1.** ಶ್ರೀ.ಸಚಿನ ತಂದೆ ಸುಭಾಷ ಕೋಳಿ,
ವಯಾ: **32** ವರ್ಷ, ಉ: ಒಕ್ಕಲುತನ,
ಸಾಃ ಮನೆ ನಂ.**26**, ಭುವಿ, ಪಂತಾಜಲಿ ಕ್ರಾಸ್,

ಜೈನ ಮಂದಿರ ಹತ್ತಿರ, ಬಂದೂರ,
ಪೋನದ, ಜಿಃ ಉತ್ತರ ಗೋವಾ-**403401**

**2.** ಶ್ರೀಮತಿ. ಕಲಾವತಿ ಗಂಡ ಸುಭಾಷ ಕೋಳಿ,
ವಯಾ: **54** ವರ್ಷ, ಉ: ಮನೆಗೆಲಸ,
ಸಾಃ ಮನೆ ನಂ.**26,** ಭುವಿ, ಪಂತಾಜಲಿ ಕ್ರಾಸ್,
ಜೈನ ಮಂದಿರ ಹತ್ತಿರ, ಬಂದೂರ,
ಪೋನದ, ಜಿಃ ಉತ್ತರ ಗೋವಾ-403401

**3.** ಶ್ರೀ.ಸಂತೋಷ ತಂದೆ ಸುಭಾಷ ಕೋಳಿ,
ವಯಾ: **36** ವರ್ಷ, ಉ: ಸೇವೆ,
ಸಾಃ ಮನೆ ನಂ.**26,** ಭುವಿ, ಪಂತಾಜಲಿ ಕ್ರಾಸ್,
ಜೈನ ಮಂದಿರ ಹತ್ತಿರ, ಬಂದೂರ,
ಪೋನದ, ಜಿಃ ಉತ್ತರ ಗೋವಾ-403401

(ಪ್ರತಿವಾದಿ **1** ರಿಂದ **3** ರ ಪರ ಶ್ರೀ.ಬಿ.ಎಚ್.ಕೆ,ವಕೀಲರು)

ಮಧ್ಯಂತರ ಅರ್ಜಿ ಸಂಖ್ಯೆ **3** ರ ಮೇಲಿನ ಆದೇಶ

ವಾದಿಯರ ಪರ ನ್ಯಾಯವಾದಿಗಳು ಮಧ್ಯಂತರ ಅರ್ಜಿ ಸಂಖ್ಯೆಃ**3** ಅನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ **39** ನಿಯಮ **1** ಮತ್ತು **2** ರ ಅಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ, ಈ ದಾವೆಯ ಅಧಿವಿಚಾರಣೆ ಆಗುವವರೆಗೂ ದಾವಾ ಆಸ್ತಿಗಳಾದ ಝಂಜರಕೊಪ್ಪ ಗ್ರಾಮದ ಸರ್ವೇ ನಂ.**35/2** ಮತ್ತು **35/13** ವಿಸ್ತೀರ್ಣ **3** ಎಕರೆ **02** ಗುಂಟೆ ಮತ್ತು **5** ಎಕರೆ **24** ಗುಂಟೆ ಜಮೀನುಗಳಿಗೆ ಸಂಬಂಧಪಟ್ಟಂತೆ ಪ್ರತಿವಾದಿಯರು ಮತ್ತು ಅವರ ಪರ ಹಿತೈಷಿಗಳಾಗಲೀ ಅಥವಾ ಅವರ ಸಂಬಂಧಿಕಾರಾಗಲೀ ದಾವಾ ಆಸ್ತಿಯಲ್ಲಿರುವ ಮಣ್ಣು ಮತ್ತು ಮರಳನ್ನು ತೆಗೆಯದಂತೆ ಈ ಪ್ರತಿವಾದಿಯರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

**2.** ಸದರಿ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ವಾದಿ **1** ರವರು ಹೇಳುವುದೇನೆಂದರೆ, ವಾದಿ ನಂ.**1** ರವರು ಪ್ರತಿವಾದಿ ನಂ.**1** ರವರ ಹೆಂಡತಿ ಆಗಿರುವರು. ಇವರ ವಿವಾಹವು ದಿನಾಂಕಃ **15.05.2015** ರಂದು ಅನುಭವ ಮಂಟಪ ಅಂಕಲಿ ಗ್ರಾಮದಲ್ಲಿ ಆಗಿರುವುದು. ಸದರಿ ವೈವಾಹಿಕ ಜೀವನದಿಂದ ದಿನಾಂಕಃ **04.03.2016** ವಾದಿ **2** ರವರಾದ ಶ್ರೇಯ ಎಂಬವವಳು ಜನಿಸಿರುವಳು. ಪ್ರತಿವಾದಿ **2** ರವರ ಮಾತು ಕೇಳಿ ಪ್ರತಿವಾದಿ **1** ರವರು ವಾದಿ **1** ರವರಿಗೆ ಕಿರುಕುಳವನ್ನು ನೀಡಿರುವರು ಹಾಗೂ ವಾದಿ **1** ರವರು ಗರ್ಭಿಣಿ ಆಗಿರುವಾಗ ಯಾವುದೇ ವೈಧ್ಯಕೀಯ ಚಿಕಿತ್ಸೆ ಕೊಡಿಸಿರುವುದಿಲ್ಲ. ವಾದಿ **2** ಜಿ.ಎಸ್.ಸಿ. ಆಂಗ್ಲ ಮಾದ್ಯಮ ಹಿರಿಯ ಪ್ರಾಥಮಿಕ ಶಾಲೆ, ಚಿಕ್ಕೋಡಿ ಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವಳು.

**3.** ವಾದಿಯರು ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿದ್ದು, ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಜಂಟಿ ಹಿಂದೂ ಅವಿಭಕ್ತ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವುದು. ಸದರಿ ದಾವಾ ಆಸ್ತಿಗಳಲ್ಲಿ ವಾದಿಯರು **1/9** ಹಿಸ್ಸೆಯನ್ನು ಹೊಂದಿರುವರು. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ವಿನಂತಿಸಿಕೊಂಡಿರುವರು.

**4.** ಪ್ರತಿವಾದಿ **1** ರಿಂದ **3** ರವರು ಈ ಮಧ್ಯಂತರ ಅರ್ಜಿಗೆ ದಿನಾಂಕಃ **03.06.2025** ರಂದು ತಮ್ಮ ತಕರಾರನ್ನು ಸಲ್ಲಿಸಿರುವರು.

**5.** ಪ್ರತಿವಾದಿ **3** ರವರು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿನ ಸಂಗತಿಗಳು ನಿಜವಿರುವುದಿಲ್ಲ. ವಾದಿಯರು ಪ್ರತಿವಾದಿಯರ ವಿರುದ್ದ ಪಾಲು ವಿಭಾಗ ಕೋರಿ ಈ ದಾವೆ ದಾಖಲು

ಮಾಡಿರುವರು. ವಾದಿಯರು ವಾದ ಪತ್ರದಲ್ಲಿ ಹೇಳಿರುವಂತೆ ದಾವಾ ಜಮೀನುಗಳು ವಾದಿಯರ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಜಂಟಿ ಅವಿಭಕ್ತ ಕುಟುಂಬದ ಆಸ್ತಿಗಳು ಎಂಬುದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಅದೇರೀತಿ ಈ ಮಧ್ಯಂತರ ಅರ್ಜಿಯಲ್ಲಿ ಹೇಳಿರುವಂತೆ ಜಮೀನಿನಿಂದ ಮಣ್ಣನ್ನು ತೆಗೆದಿರುವ ಬಗ್ಗೆ ಯಾವುದೇ ಪೋಟೋಗಳನ್ನು ಹಾಜರುಪಡಿಸಿರುವುದಿಲ್ಲ. ವಾದಿಯರು ಪ್ರತಿವಾದಿಯರಿಗೆ ತೊಂದರೆ ನೀಡುವ ಸಲುವಾಗಿ ಈ ಸುಳ್ಳು ಮಧ್ಯಂತರ ಅರ್ಜಿಯನ್ನು ದಾಖಲು ಮಾಡಿದ್ದು ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಬೇಕೆಂದು ವಿನಂತಿಸಿಕೊಂಡಿರುವರು.

**6.** ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸಿದವು.

**1.** ಮಧ್ಯಂತರ ಅರ್ಜಿ ಸಂಖ್ಯೆ: **3** ನ್ನು ವಾದಿಯರು ಮೇಲ್ನೋಟಕ್ಕೆ ಸಮಂಜಸವಾದ ದಾವೆಯನ್ನು ಹೊಂದಿರುತ್ತಾರೆ ಎಂಬುದನ್ನು ವಾದಿ ರುಜುವಾತುಪಡಿಸುವರೇ **?**

**2.** ಈ ಮಧ್ಯಂತರ ಅರ್ಜಿಯು ತಮ್ಮ ಪರವಾಗಿ ಇರುತ್ತದೆ ಎಂಬುದನ್ನು ವಾದಿಯರು ರುಜುವಾತುಪಡಿಸುವರೇ **?**

**3.** ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದೆ ಇದ್ದರೆ ವಾದಿಯರಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆಂಬುದನ್ನು ಮೇಲ್ನೋಟಕ್ಕೆ ವಾದಿಯರು ರುಜುವಾತುಪಡಿಸುವರೇ **?**

**4.** ಏನು ಆದೇಶ **?**

**7.** ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ **1 :** ನಕಾರಾತ್ಮಕವಾಗಿ,

ಅಂಶ **2 :** ನಕಾರಾತ್ಮಕವಾಗಿ,

ಅಂಶ **3 :** ನಕಾರಾತ್ಮಕವಾಗಿ,

ಅಂಶ **4 :** ಅನ್ನು ಅಂತಿಮ ಆದೇಶದಂತೆ,
ಈ ಕೆಳಕಂಡ ಕಾರಣಗಳಿಗಾಗಿ.

<u>ಕಾರಣಗಳು</u>

**8.** <u>ಅಂಶ **1** ರಿಂದ **3:**</u> ಈ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಂಗತಿಗಳ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರ ಅಡಿಯಲ್ಲಿ ನಿರ್ಬಂಧಕಾಜ್ಞೆ ಹೊರಡಿಸುವ ಸಲುವಾಗಿ ನ್ಯಾಯಾಲಯವು ಅರ್ಜಿಯನ್ನು ಮೇಲ್ನೋಟಕ್ಕೆ ಮೊಕದ್ದಮೆ ಮತ್ತು ಸಂಭಾವನೆಯ ರೀತಿಯಿಂದ ಎಂಬ ಆಧಾರದ ಮೇಲೆ ಯಾವುದೇ ವಿಶ್ಲೇಷಣೆ ಮಾಡಿರುವುದಿಲ್ಲ. ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆಯಬೇಕಾದರೆ ಅರ್ಜಿದಾರರು ವಿಚಾರಣೆಗೆ ಹೋಗಲು ಮೇಲ್ನೋಟಕ್ಕೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ದ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ಧ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಹಾನಿಯನ್ನು ರಕ್ಷಿಸಲು ರಕ್ಷಣೆ ಹೊಂದಿರಬೇಕು. ತಡೆಯಾಜ್ಞೆಯನ್ನು ನೀಡುವುದಕ್ಕಿಂತ ಅದನ್ನು ಪ್ರಧಾನ ಮಾಡದೇ ಇರುವುದರಿಂದ ಉಂಟಾಗುವ ಹಾನಿ ಹೆಚ್ಚಿನದು ತೀವ್ರತರಹದ್ದಾಗಿರುತ್ತದೆ.

**9.** ಸದರಿ ದಾವೆಯನ್ನು ವಾದಿಯರು ಪ್ರತಿವಾದಿಯರ ವಿರುದ್ಧ ದಾವಾ ಆಸ್ತಿಗಳಲ್ಲಿ ತಮ್ಮ **1/9** ಹಿಸ್ಸೆಯ ಪಾಲು ವಿಭಾಗ ಕುರಿತು ಈ ದಾವೆಯನ್ನು ದಾಖಲು ಮಾಡಿರುವರು. ಈ ದಾವಾ ದಾಖಲುಮಾಡಿದ ನಂತರ ದಾವಾ ಸಮನ್ಸ ಪ್ರತಿವಾದಿಯರಿಗೆ ಜಾರಿಯಾದ ನಂತರ ಪ್ರತಿವಾದಿಯರು ತಮ್ಮ ವಕೀಲರ ಮೂಲಕ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ಲಿಖಿತ ಪತ್ರವನ್ನು ಸಲ್ಲಿಸಿದ್ದು ನಂತರ ಈ

ನ್ಯಾಯಾಲಯವು ದಿನಾಂಕಃ **16.04.2025** ರಂದು ವಿವಾದಾಂಶಗಳನ್ನು ರಚಿಸಿದ್ದು ನಂತರ ವಾದಿಯರ ಸಾಕ್ಷಿಗಾಗಿ ಈ ದಾವೆ ಮುದ್ದತನ್ನು ನಿಗದಿಪಡಿಸಿದಾಗ ವಾದಿಯ ಪರ ವಕೀಲರು ಈ ಮಧ್ಯಂತರ ಅರ್ಜಿಯನ್ನು ದಾಖಲುಮಾಡಿರುವರು. ವಾದಿಯರು ವಾದ ಪತ್ರದಲ್ಲಿ ಹೇಳಿರುವಂತೆ ದಾವಾಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಜಂಟಿ ಹಿಂದೂ ಕುಟುಂಬದ ಆಸ್ತಿಗಳಾಗಿದ್ದು, ವಾದಿಯರು ತಮ್ಮ ಕಾನೂನುಬದ್ಧವಾದ ಹಿಸ್ಸೆಯನ್ನು ನೀಡುವಂತೆ ಪ್ರತಿವಾದಿಯರಿಗೆ ವಿನಂತಿಸಿದಾಗ ಅವರು ನಿರಾಕರಿಸಿರುವುದರಿಂದ ಈ ದಾವೆಗೆ **2023** ರ ಏಪ್ರಿಲ ತಿಂಗಳಿನಲ್ಲಿ ವ್ಯಾಜ್ಯಕಾರಣ ಉಂಟಾಗಿರುವುದಾಗೆಂದು ಹೇಳಿ ವಾದ ಪತ್ರದಲ್ಲಿ ಕೋರಿರುವಂತೆ ದಾವೆಯನ್ನು ಡಿಕ್ರಿಗೊಳಿಸುವಂತೆ ಈ ದಾವೆಯನ್ನು ದಾಖಲು ಮಾಡಿರುವರು.

**10.** ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳುವುದೇನೆಂದರೆ ವಾದ ಪತ್ರದಲ್ಲಿ ಹೇಳುವಂತೆ ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಬಗ್ಗೆ ಹೇಳಿದ್ದು ದಾವಾ ಆಸ್ತಿಗಳಲ್ಲಿ ಯಾವುದೇ ಪಾಲು ವಿಭಾಗ ಆಗಿರುವುದಿಲ್ಲ ದಾವಾ ಆಸ್ತಿಯಲ್ಲಿ ಪ್ರತಿವಾದಿ **1** ರವರಿಗೆ ಬರುವ **1/3** ಹಿಸ್ಸೆಯಲ್ಲಿ ವಾದಿಯರಿಗೆ **1/9** ಹಿಸ್ಸೆಯನ್ನು ಹೊಂದಿದ್ದು ಈ ದಾವೆಯ ವಿಚಾರಣೆ ಹಂತದಲ್ಲಿ ಪ್ರತಿವಾದಿಯರು ದಾವಾ ಜಮೀನನಿಂದ ಮಣ್ಣು ಮತ್ತು ಮರಳನ್ನು ತೆಗೆಯುತ್ತಿರುವುದರಿಂದ ಇದರಿಂದ ಜಮೀನಿನ ಫಲವತ್ತತೆ ಹಾಳಾಗುವುದು ಆದ್ದರಿಂದ ವಾದಿಯರಿಗೆ ನಷ್ಟವಾಗುವುದು ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಆದೇಶ ಮಾಡಬೇಕೆಂದು ವಿನಂತಿಸಿಕೊಂಡಿರುವರು.

**11.** ವಾದ ಪತ್ರದಲ್ಲಿ ಹೇಳಿರುವಂತೆ ವಾದಿಯರು ಮತ್ತು ಪ್ರತಿವಾದಿಯರ ಪೂರ್ವಜರ ಜಂಟಿ ಕುಟುಂಬದ ಪಿತ್ರಾರ್ಜಿತ ಆಸ್ತಿಗಳಾಗಿರುವವು ಎಂದು ಹೇಳಿರುವರು.

ಆದರೆ ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳು ಎಂಬುದಕ್ಕೆ ಸಂಬಂಧಪಟ್ಟಂತೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆದರೆ ವಾದಿಯರು ಹಾಜರುಪಡಿಸಿರುವ ನಿಪಿ-1 ಮತ್ತು 2 ಪಹಣಿ ಪತ್ರಿಕೆಗಳನ್ನು ದಿನಾಂಕಃ 17.07.202 ವಿಭಾಗದ ಪ್ರಕಾರ ಹೆಸರು ದಾಖಲಾಗಿರುವುದು ಈ ದಾಖೆಯಿಂದ ಕಂಡುಬರುವುದು. ಆದರೆ ಈ ದಾವಾ ಜಮೀನುಗಳು ಪ್ರತಿವಾದಿ 1 ರವರಿಗೆ ಪೂರ್ವಜರಿಂದ ಬಂದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದೇ ಇರುವುದರಿಂದ ಈ ಹಂತದಲ್ಲಿ ಮೇಲ್ನೋಟಕ್ಕೆ ವಾದಿಯರ ಪರವಾಗಿರುವಂತಹ ಪ್ರಕರಣವಾಗಿರುವುದಿಲ್ಲ. ದಾವಾ ಆಸ್ತಿಗಳು ಪಿತ್ರಾರ್ಜಿತ ಆಸ್ತಿಗಳೆಂಬುವುದರ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

**12.** ಆದ್ದರಿಂದ ಈ ಹಂತದಲ್ಲಿ ವಾದಿಯು ಮಧ್ಯಂತರ ಅರ್ಜಿ ಸಂಖ್ಯೆ 3 ನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ 39 ನಿಯಮ 1 ಮತ್ತು 2 ರ ಅಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಪ್ರತಿವಾದಿ 1 ರಿಂದ 3 ರವರಿಗೆ ದಾವಾಸ್ತಿ ಕ್ರಮ ಸಂಖ್ಯೆ. 1 ಮತ್ತು 2 ರಲ್ಲಿರುವ ಉಸುಕು ಮತ್ತು ಮಣ್ಣನ್ನು ತೆಗೆಯದಂತೆ ತಾತ್ಕಲಿಕ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಅರ್ಜಿಯನ್ನು ದಾಖಲು ಮಾಡಿರುವರು. ಆದರೆ ದಾವಾ ಆಸ್ತಿಗಳು ವಾದಿಯರ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿರುವುವು ಎಂಬುದಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿಯರ ವಿರುದ್ದ ಪರಿಹಾರ ಪಡೆದುಕೊಳ್ಳಲು ಮೇಲ್ನೋಟಕ್ಕೆ ಸಮಂಜಸವಾದ ಯಾವುದೇ ಕಾರಣಗಳನ್ನು ವಾದಿಯರು ಹೊಂದಿರುವುದಿಲ್ಲ. ಆದ್ದರಿಂದ ಒಂದು ವೇಳೆ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದ್ದಲ್ಲಿ ವಾದಿಯರು ತುಂಬಲಾರದ ನಷ್ಟ ಹಾನಿ ಸಂಭವಿಸುವ ಸಾಧ್ಯತೆ ಇರುವುದು ಎಂಬುದನ್ನು ವಾದಿಯರು ರುಜುವಾತು ಪಡಿಸಿರುವುದಿಲ್ಲ. ಆದ್ದರಿಂದ

ವಾದಿಯು ಮೇಲ್ನೋಟದ ಕೇಸು ಇರುವುದಾಗಿ ಎಂದು ತೋರಿಸಲು ಹಾಗೂ ಅನುಕೂಲ ಒಲುವು ಸಹ ವಾದಿಯ ಪರ ಆಗಿರುವುದೆಂದು ಹಾಗೂ ಈ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ತುಂಬಲಾರದ ನಷ್ಟ ವಾದಿಗೆ ಆಗುವುದು ಎಂಬ ಸಂಗತಿಯನ್ನು ರುಜುವಾತು ಪಡಿಸುವಲ್ಲಿ ವಾದಿಯು ವಿಫಲವಾಗಿರುವುದರಿಂದ ಈ ಅರ್ಜಿಯನ್ನು ಪುರಸ್ಕರಿಸಲು ಅನುಕೂಲತೆಯ ಒಲುವು ಮೇಲ್ನೋಟಕ್ಕೆ ವಾದಿಯರ ಪರ ಇರುವದೆಂದು ಕಂಡು ಬರದೆ ಇರುವುದರಿಂದ ಈ ಮದ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿಯರ ವಿರುದ್ದ ಆದೇಶ ಹೊರಡಿಸಲು ಯಾವುದೇ ಸಕಾರಣಗಳು ಇರುವುದಿಲ್ಲ. ಆದ್ದರಿಂದ ಅಂಶ **1** ರಿಂದ **3** ನ್ನು ನಕಾರಾತ್ಮಕವಾಗಿ ಉತ್ತರಿಸುತ್ತೇನೆ.

**13.** **<u>ಅಂಶ 4 :</u>** ಮೇಲ್ಕಾಣಿಸಿದ ಕಾರಣಗಳನ್ನು ಆಧರಿಸಿ ಈ ಕೆಳಕಂಡಂತೆ ಆದೇಶಿಸುವೇನು...

## <u>ಆದೇಶ</u>

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರ ಅಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: **3** ನ್ನು ವಜಾಗೊಳಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕ: **04** ನೇ ಜುಲೈ **2025** ನೇ ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

(ವಿಜಯಕುಮಾರ.ಎಮ್.ಕನ್ನೂರು)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.

VIJAYAKUMAR KANNUR
Digitally signed by VIJAYAKUMAR KANNUR
Date: 2025.07.08 09:53:37 +0530